artistes were not taken into consideration at all. The Academy did not show them the courtesy of extending an invitation to them, because they do not go to the Ministers. They do not go to the persons connected with the Sangeetha Natak Academy and the Lalitha Kala Academy. Thus some sort of step-motherly treatment is meted out to some of those artists, and naturally the Sangeetha Natak Academy and the Lalitha-Kala Academy have failed in their duties. They have failed to give proper encouragement to the development of art in the Mysore State.

Sir, in Russia some years back, when Boris Patternik wrote his book, Nobel Prize winning 'Dr. Zhivago,' Russia being a totalitarian country, they were successful in banning that book in Russia, though hundreds and thousands of copies of 'Dr. Zhivago' were printed in all languages of the World and read by millions of people in the world. Again' Lady Chatterly's Lover—another provocative novel was banned in England and ultimately the case went to the highest tribunal in the land and that highest tribunal gave the award in favour of giving freest play to freedom of expression and freedom of speech and freedom to write whatever one would like.

So now today, by trying to enact this piece of legislation we are indirectly trying to play a fraud on the Constitution. This is something to be compared with that. What the Constitution gives directly, we are trying to circumvent through this piece of legislation. We are trying to take away the rights which the people of this nation have...

MR. SPEAKER.—Is the Hon'ble Member going to finish now or does we wish to have a little more time tomorrow?

SRI S. M. KRISHNA.—I will take a couple of minutes tomorrow, Siri

MR. SPEAKER.—Then this subject will continue tomorrow. Sr. Krishna will continue his speach tomorrow.

Now, we will take up half-an-hour debate.

Half-an-hour discussion on Q. No. 526 *re*: Auditing of the Accounts of Mysore State Cotton Weavers' Apex Bank for 1962-63.

6-00 P.M.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, 39 ನೆಯ ಕಟ್ಟಿಗೆ ಸೇರಿದ 526 ನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ವಿಷಯದಲ್ಲಿರುವ ಕೆಲವು ಲೋಪದೋಷಗಳನ್ನು ಸರಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ಮೈಸೂರು ರಾಜ್ಯದ ಹತ್ತಿ ಸೇವಾ ಸಹಕಾರ ಸಂಘದ ಆಡಳಿತ ಮಂಡಲಿಯಲ್ಲಿ ನಡೆದಿರತಕ್ಕ ಕೆಲವು ಲೋಪದೋಷಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಮಾನ್ಯ ಅಧ್ಯಕ್ಷರು ಈಗ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ವೈಯುಕ್ತಿಕವಾಗಿ ನಾನು ಯಾರ ಮೇಲೆಯೂ ಆರೋಪಣೆ ಗಳನ್ನು ಮಾಡುತ್ತಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ, ಆಡಳಿತ ದೃಷ್ಟಿಯಿಂದ ಮಾನ್ಯ ಮಂತ್ರಿಗ ಳನ್ನು ಪ್ರಾರ್ಥಿಸುವುದೇನೆಂದರೆ ಹತ್ತು ಲಕ್ಷದಷ್ಟು ನೇಯ್ಕೆದಾರರ ಯಶಸ್ಸು ಸಂಸ್ಥೆಯ ಕಾರ್ಯ ಕಲಾಪಗಳನ್ನವಲಂಬಿಸಿದೆ. ಆದರೆ ಇಲ್ಲಿ ಆಗಿರತಕ್ಕ ಅನ್ಯಾಯಗಳನ್ನು ಮಾನ್ಯ ಮಂತ್ರಿಗಳ ಗಮ ನಕ್ಕೆ ತರಬೇಕಾಗಿದೆ. ಅವರಿಗೂ ಈಗಾಗಲೇ ಗೊತ್ತಾಗಿದೆ ಎಂದು ನನಗೆ ತಿಳಿದ ಮಟ್ಟಿಗೆ ತೋರು

(ಶ್ರೀ ಎಚ್. ಡಿ. ದೇವೇಗೌಡ)

ತ್ತದೆ. ಇದರಲ್ಲಿ ಆಗುತ್ತಿರುವ ಲೋಪದೋಷಗಳಲ್ಲಿ ಮುಖ್ಯವಾದ ಒಂದೆರಡು ಲೋಪದೋಷಗಳನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ. ಸಂಸ್ಥಾನದಲ್ಲಿರುವ ಸುಮಾರು ಹತ್ತು ಲಕ್ಷ ನೇಯ್ಗೆಕಾರರು ತಮ್ಮ ಕೆಲಸಗಳನ್ನು ಮಾಡುವಾಗ ಒಂದು ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಅಲ್ಲಿ ನಡೆಯುತ್ತಿರುವ ಅನೇಕ ನಿದರ್ಶನಗಳನ್ನು ಕೂಡಬಹುದು. ಅಲ್ಲಿ ಅಗಬಾರದಂತಹ ಅನ್ಯಾಯಗಳು ನಡೆಯುತ್ತಿವೆ ಎಂದು ವಿಷಾದದಿಂದ ಹೇಳಿಬೇಕಾಗಿದೆ. ಸುಮಾರು ಒಂದೂವರೆ ಲಕ್ಷದಷ್ಟು ಮಗ್ಗಗಳಿವೆ. ಹೆಚ್ಚಾಗಿ ಎಂದರೆ ಸುಮಾರು ಹದಿನೆಂಟು ಸಾವಿರ ಪವರ್ ಲೂಂಗಳಿವೆ. ಇವುಗಳ ಬಗ್ಗೆ ಸಹಕಾರ ಸಂಘಗಳಲ್ಲಿ ಎಷ್ಟು ಅನ್ಯಾಯಗಳಾಗುತ್ತಿವೆ. ಲೆಕ್ಕಗಳು ಆಡಿಟ್ ಆಗಿ ವರದಿ ಬಂದಿದೆಯೇ ಎಂದು ಪ್ರಶ್ನೆ ಕೇಳಿದುದಕ್ಕೆ ಉತ್ತರವಾಗಿ ಕಳೆದ ವರ್ಷ ಆಡಿಟ್ಟು ರಿಪೋರ್ಟು ಬರಲು ಕಳೆದ ವರ್ಷದ ಆಡಿಟ್ ಆಗಿಲ್ಲ ಎಂದು ಹೇಳಿದರು. ಅದರ ಹಿಂದಿನ ವರ್ಷದ ಆಡಿಟ್ಟಿನ ಪ್ರಕಾರ ಸುಮಾರು 81,000 ದಿಂದ 82,000 ರೂಪಾಯಿಗಳ ಲೆಕ್ಕದಷ್ಟು ಈ ಸೇವಾ ಸಹಕಾರ ಸಂಘದಲ್ಲಿ ದುರ್ವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಅದರೆ ಮೊನ್ನೆ ಉತ್ತರ ಕೊಡುವಾಗ 1960-61 ರಲ್ಲಿ 68 ಸಾವಿರ ರೂಪಾಯಿನಷ್ಟು ಮಾತ್ರ ನಷ್ಟ ಆಗಿದೆ ಎಂದು ಹೇಳಿದ್ದಾರೆ. ಇದರಿಂದ ನನಗೆ ಸಂಶಯ ಬರುತ್ತಿರುವುದು. ಏಕೆಂದರೆ 68,000ದ ಮತ್ತ 85,000 ಹೀಗೆ ವಿಧ ವಿಧವಾದ ಅಂಕಿ ಅಂಶಗಳು ಕೊಡುತ್ತಿದ್ದೀರಿ. ಅದು ಸರಿಯಾದ ರೀತಿಯಲ್ಲಲ್ಲ. ಇದಕ್ಕೆ ಕಾರಣವೇನು ? ಪ್ರೈಮರಿ ಸಹಕಾರ ಸಂಘಗಳಿಗೆ ಕೊಡಬೇಕಾದ ಹಣ ಇದರಲ್ಲಿ ಸೇರಿಲ್ಲ ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಪ್ರೈಮರಿ ನೇಕಾರ ಸಹಕಾರಿ ಸಂಘಗಳಿಗೆ, ಪ್ರಾಂತೀಯ ಹತ್ತಿ ಸಹಕಾರ ಸಂಘಗಳಿಗೆ ಹಣ ಸಹಾಯ ದೊರೆಯುತ್ತದೆ.

ಇನ್ನೊಂದು ವಿಷಯ 1954 ನೇ ಇಸವಿಯಲ್ಲಿ ಹೊಳೆನರಸೀಪುರದ ಒಂದು ಸೊಸೈಟಿಗೆಂದು 1,400 ರೂಪಾಯಿಗಳ ಮೂಲಕ ಕಳುಹಿಸಿದ್ದರೆ ಅದನ್ನು ತೆಗೆದುಕೊಂಡು ಅದರ ಖಾತೆಯನ್ನು ಇನ್ನು ಪಾವತಿ ಮಾಡಿಲ್ಲ. ಆಡಿಟ್ ರಿಪೋರ್ಟಿನಲ್ಲಿ ಇದನ್ನು ನಮೂದು ಮಾಡಿದ್ದಾರೆಯೇ? ಪ್ರಾಂತೀಯ ಸಹಕಾರ ಸಂಘಗಳ ವಹಿವಾಟುಗಳು ಮಾಯಾ ಬಜಾರಿನಂತೆ ನಡೆಯುತ್ತಿವೆ ಎಂದರೆ ತಪ್ಪಾಗಲಾರದು. ಇಲ್ಲಿ ಆಗಿರುವಷ್ಟು ಅನ್ಯಾಯಗಳು ಬೇರೆಲ್ಲಿಯೂ ಆಗುತ್ತಿಲ್ಲ. ಇಲ್ಲಿ ಸುಮಾರು 82,000 ದಷ್ಟು ಮಾತ್ರ ನಷ್ಟವಾಗಿದೆ ಎಂದು ಹೇಳುತ್ತಾರೆ. ಸರಕಾರದವರು ಇಲ್ಲಿಗೆ ಒಬ್ಬರನ್ನು ಎನ್‌ಕ್ವೈರಿ ಆಫೀಸರನ್ನು ಸರಿಯಾಗಿ ವಿಚಾರಣೆ ಮಾಡಲು ನೇಮಿಸಿದರೆ ಆಗ ಅಂಕಿಅಂಶಗಳು ಗೊತ್ತಾಗುತ್ತದೆ. ಸುಮಾರು ಹತ್ತು ಲಕ್ಷದಷ್ಟು ಮಿಸ್‌ಅಪ್ರೋಪ್ರಿಯೇಷನ್ನು ಆಗಿದೆ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಪ್ರೈಮರಿ ಸಹಕಾರ ಸಂಘದವರು ಒಂದು ಮಾಲನ್ನು ಪ್ರಾಂತೀಯ ಸಹಕಾರ ಸಂಘಕ್ಕೆ ಕಳುಹಿಸಿಕೊಟ್ಟು ಒಂದು ವರ್ಷದ ಮೇಲೆ ಆ ಮಾಲನ್ನು ವಾಪಸು ಕೊಟ್ಟರೆ ಹೇಗೆ ? ಮಾರ್ಕೆಟ್ಟಿನಲ್ಲಿ ಆ ಮಾಲನ್ನು ಪುನಃ ಕೊಂಡು ಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ವರ್ಷದವರೆಗೆ ಪ್ರೈಮರಿ ಸೊಸೈಟಿಯು ಮಾಲನ್ನು ಇಟ್ಟುಕೊಂಡು ಅದನ್ನು ವಾಪಸು ಕೊಟ್ಟರೆ ಈ ಸೊಸೈಟಿಗಳಲ್ಲಿ ಎಷ್ಟು ಮಟ್ಟಿನ ಅವ್ಯವಸ್ಥೆ ನಡೆದಿದೆ ಎನ್ನುವುದು ಗೊತ್ತಾಗುತ್ತದೆ. ಈ ರೀತಿ ಶಾಂತಿಗ್ರಾಮದಲ್ಲಿನ ಸೊಸೈಟಿಯ ಮಾಲನ್ನು ಇಟ್ಟುಕೊಂಡು ಒಂದು ವರ್ಷದ ಮೇಲೆ ವಾಪಸು ಕಳುಹಿಸಿದಾಗ ನುಸಿ ಹತ್ತಿ ಹಾಳಾಗಿ ಹೋಯಿತು ? ಇದರ ಜವಾಬ್ದಾರಿಯನ್ನು ಯಾರು ಹೊರಬೇಕು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಇನ್ನು Working Capitalನ ವಿಚಾರ ಸರ್ಕಾರದವರು ಪ್ರಾಂತೀಯ ಸೊಸೈಟಿಯ ಮೂಲಕ ತಾಲ್ಲೂಕು ಮಟ್ಟದ ಸೊಸೈಟಿಗಳಿಗಾಗಿ ಉದಾರವಾಗಿ ಹಣ ಸಹಾಯ ಮಾಡುತ್ತಾರೆ. ಹೀಗೆ ಕೊಟ್ಟಿರುವ ಹಣದ ಬಗ್ಗೆ ಎನ್‌ಕ್ವೈರಿ ಆಫೀಸರು ಬಂದು ತನಿಖೆ ಮಾಡಿದರೆ ಅನಂತರ ಇದನ್ನು ವಿಚಾರ ಮಾಡೋಣ. ಇಲ್ಲಿ ಒಂದು ಸೊಸೈಟಿಗಾಗಿ 18,000 ದಷ್ಟು ವರ್ಕಿಂಗ್ ಕ್ಯಾಪಿಟಲ್‌ಗಾಗಿ ಎಂದು ಕೊಟ್ಟಿದ್ದರೆ 6,000 ರೂಪಾಯಿಗಳಷ್ಟು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಇದರಲ್ಲುಳಿದ 12,000 ರೂಪಾಯಿಗಳ ಬಗೆಗೆ ಅಕೌಂಟೇ ಇಲ್ಲ. ಇದು ಒಂದು ಸೊಸೈಟಿಯ ನಿದರ್ಶನವಾಯಿತು. ಈ ತರಹ ಸಂಸ್ಥಾನದಲ್ಲಿ ಸುಮಾರು ಆರುನೂರು ಸಹಕಾರ ಸಂಘಗಳಿವೆ. ಇಲ್ಲೆಲ್ಲಾ ಏನೇನು ಅನ್ಯಾಯಗಳಾಗಿವೆ ಎನ್ನುವುದನ್ನು ನೋಡಿ ತನಿಖೆಮಾಡಿ ಪರಿಶೀಲನೆ ಮಾಡುವುದು ಅವಶ್ಯವಾಗಿದೆ.

ಇನ್ನು ಸಬಸಿಡಿಯ ವಿಚಾರ. ಸರಕಾರ ಸಬ್ಸಿಡಿ ಎಂದೇನು ಕೊಡುತ್ತಾರೆ ಅದನ್ನು ಪ್ರಾಂತೀಯ ಸಹಕಾರ ಸಂಘಕ್ಕೆ ಕೊಟ್ಟು ಅದರ ಮೂಲಕ ಪ್ರೈಮರಿ ಸೊಸೈಟಿಗಳಿಗೆ ಹಣವನ್ನು ಸಾಲವಾಗಿ ಕೊಡುತ್ತಾರೆ. ಇದರಿಂದ ಆ ಸಂಘಗಳು ತಮಗೆ ಬೇಕಾದ ಮೆಟೀರಿಯಲ್ಸ್‌ಗಳನ್ನು ತೆಗೆದುಕೊಂಡು ಅವರು ಮಾಲುಗಳನ್ನು ಸಪ್ಲೈ ಮಾಡುತ್ತಾರೆ. ಅವರಿಗೆ ಮಗ್ಗಕ್ಕಾಗಿ ಬೇಕಾಗುವ ಸಾಮಾನು

ಗಳನ್ನು ಸರಬರಾಜು ಮಾಡುವಾಗ ಶೇಕಡ 50 ರೂಪಾಯಿನಷ್ಟು ಮಾತ್ರ ಬೇರೆ ಇರುವ ಮಾಲಿಗೆ ನೂರು ರೂಪಾಯಿಗಳವರೆಗೂ ಬೆಲೆ ಕೊಡುತ್ತಾರೆ. ಇದರಿಂದ ಇಲ್ಲಿ ಹೆಚ್ಚಿನ ಹಣ ದುರುಪಯೋಗ ವಾಗುತ್ತಿದೆ. ಸುಮಾರು ಎರಡು ಲಕ್ಷದಷ್ಟು ಹಣ ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ. ಆದರೂ ಪ್ರೈಮರಿ ಸೊಸೈಟಿಯವರು ಸರಿಯಾಗಿ ಉಪಯೋಗಮಾಡದೇ ಇಷ್ಟೊಂದು ಅನ್ಯಾಯಗಳು ನಡೆದಿದ್ದರೆ ಸರಕಾರ ಕಣ್ಣು ತೆಗೆದು ನೋಡಬೇಡವೇ! ಅವರೇ ಕೊಟ್ಟರತಕ್ಕ ಸುಮಾರು ಇಪ್ಪತ್ತಾರು ಲಕ್ಷದಷ್ಟು ಸಾಲದ ಹಣ ಮತ್ತು ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಸಬ್‌ಸಿಡಿ ಹಣ ಅದೂ ಸಾರ್ವಜನಿಕರ ಹಣ ಸರಿಯಾಗಿ ಉಪಯೋಗವಾಗದೇ ದುರುಪಯೋಗವಾದರೆ ಹೇಗೆ? ಈ ವಿಚಾರ ದಲ್ಲಿ ಸರಕಾರ ತಕ್ಕ ಏರ್ಪಾಡುಮಾಡುವುದು ಅಗತ್ಯ.

ಇನ್ನು Accumulated Stocksನ ವಿಚಾರ. ಇದು ಒಂದು ದೊಡ್ಡ ಹಿಸ್ಟರಿಯಾಗಿದೆ. ಸ್ವಲ್ಪ ಹೆಚ್ಚು ಕಡಮೆ ಮೂರುವರೆ ಲಕ್ಷ ರೂಪಾಯಿ ನಷ್ಟವಾಗಿದೆ ಈ ಬಾಬನಲ್ಲಿ. ಎಷ್ಟು ನಷ್ಟವಾದರೂ ಸರಿ ಇದನ್ನು ತುಂಬಿ ಕೊಡಲಾಗುತ್ತಿದೆ. ಇದಕ್ಕೆ ಯಾರು ಕಾರಣರು ಎನ್ನುವುದನ್ನೇನಾದರೂ ಸರಕಾರ ವಿಚಾರ ಮಾಡಿದೆಯೇ! ನಾನೇ ನೋಡಿರುವಂತೆ ಪ್ರಾಂತೀಯ ಹತ್ತಿ ಸೊಸೈಟಿಯಲ್ಲಿ ಪರ್ಚೇಸು ಕಮಿಟಿಯ ಮೂಲಕ ಹೆಚ್ಚಿನ ಬೆಲೆ ಕೊಟ್ಟು ಮಾಲುಗಳನ್ನು ತಂದು ಅದರಿಂದ ತಯಾರಿಸಿದ ಪದಾರ್ಥ ಗಳನ್ನು ಮಾರದೇ ಇರಲು ಕಾರಣವೇನು? ಇದಕ್ಕೆ ಪ್ರೊಡಕ್ಷನ್ನು ಬೆಲೆ ಹೆಚ್ಚಾಗುತ್ತದೆ ಎಂದು ಹೇಳಿದರೆ ಮಾರ್ಕೆಟ್ಟಿನಲ್ಲಿ ಈ ಮಾಲು ವ್ಯಾಪರ ವಾಗುವುದಿಲ್ಲ. Raw Materials ಗಳನ್ನು ಕೊಳ್ಳು ವಾಗ, ನ್ಯಾಯವಾದ ಬೆಲೆಯಲ್ಲಿ ಕೊಂಡು ಕೊಂಡರೆ ಜಾಸ್ತಿಯಾದ ರೇಟನ್ನು ಕೊಡುವ ಆವಶ್ಯಕತೆ ಇರುತ್ತಿರಲಿಲ್ಲ. ಈಗ ನಷ್ಟವಾಗುತ್ತಿದೆ ಇದನ್ನು ಸರಕಾರ ತುಂಬಬೇಕು ಎಂದರೆ, ಇದಕ್ಕೆ ಯಾರ ತಪ್ಪು ಎನ್ನುವುದನ್ನು ಸರಕಾರ ವಿಚಾರಮಾಡಿ ನಷ್ಟವಾಗಿರುವುದಕ್ಕೆ ಕಾರಣವಾದವರ ಮೇಲೆ ರೆಸ್‌ಪಾನ್ಸಿಬಿಲಿಟಿ ನಿಗದಿ ಮಾಡುವುದು ಅಗತ್ಯ. ಹಾಗೆ ಮಾಡದೇ ಈಗ ಇನ್ನು ಮೂರು ಲಕ್ಷದಷ್ಟು ಹಣವನ್ನು ಕೊಡಬೇಕೆನ್ನುವ ಪ್ರಯತ್ನಮಾಡಿ ಇದು ಸರಕಾರದ ಪರಿಶೀಲನೆಯಲ್ಲದೆ ಎಂದು ಕೇಳು ತ್ತೇನೆ. ಇದಕ್ಕಿಂತ ಅನ್ಯಾಯಗಳು ಬೇರೊಂದಿರಲಾರವು. ಹೀಗೆ ಆರೂವರೆ ಲಕ್ಷ ರೂಪಾಯಿಗಳಷ್ಟು ಹಣ Accumulated Stockಗಾಗಿ ನಷ್ಟವಾಗಿದೆ ಎಂದು ತಿಳಿದಾಗ ಸಾರ್ವಜನಿಕರ ಮನಸ್ಸಿನಲ್ಲಿ ಸಂಶಯ ಬರಲು ಕಾರಣವಾಗುತ್ತದೆ. ಇದನ್ನು ವಿಚಾರ ಮಾಡಲು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಂತಹ ವಿಚಾರಗಳು ಬೇಕಾದಷ್ಟಿವೆ. ಇದರ ಬಗ್ಗೆ ಹೇಳಲು ಕಾಲಾವಕಾಶ ಕಡಮೆ ಇರುವುದರಿಂದ ಕೆಲವನ್ನು ಮಾತ್ರ ಹೇಳಿದ್ದೇನೆ. ಸರಕಾರ ಇದನ್ನು ವಿಚಾರ ಮಾಡಬೇಕು ಮತ್ತು ಸರಿಯಾಗಿ ಯೋಚನೆ ಮಾಡುವುದು ಅವಶ್ಯವಿದೆ. ಇನ್ನೊಂದು Calendering and Finishning Machineryಯ ವಿಚಾರ

ಸುಮಾರು ಐದು ಲಕ್ಷದಷ್ಟು ಬೆಲೆಬಾಳುವ ಒಂದು ಮೆಷಿನರಿ ಪ್ರಾಂತೀಯ ಹತ್ತಿ ಸೊಸೈಟಿಗಾಗಿ ಎಂದು ತರಿಸಿದರು. 1954-55ರಲ್ಲೇ ತರಿಸಿದರು. ಇಲ್ಲಿಯವರೆಗೆ ಅದನ್ನು ಅಸೆಂಬಲ್ ಮಾಡಿಲ್ಲ ಇನ್ನು ಐಡಲ್‌ಆಗಿ ಹಾಗೇ ಬಿದ್ದಿದೆ. ಹೊರಗಡೆಯಿಂದ ಇದನ್ನು ತರಿಸಿ ಒಂದು ವೇಳೆ ಇದಕ್ಕೆ ಬೇಕಾದ ಸ್ಪೆಟುನೋಡಿ ಫಿಕ್ಸ್ ಮಾಡಲು ಇನ್ನೇನಾದರು ಯಂತ್ರಗಳು ಹಾಗೂ ಬೇರೆ ಬೇರೆ ಉಪಕರಣಗಳು. ಬೇಕಾಗಿದ್ದರೆ ಆ ಯಂತ್ರವನ್ನು 5 ವರ್ಷಕ್ಕೆ ಮೊದಲೇ ತರಿಸಲು ಆತುರವೇನಿತ್ತು?

5 ಲಕ್ಷ ರೂಪಾಯಿ ಮೆಶಿನರಿ ತರಿಸಿ ಅದನ್ನು ಹಾಗೇ ಬಿಟ್ಟರೆ ಅದರ ಕಂಡಿಷನ್ ಏನಾಗುತ್ತದೆ? ಇದನ್ನು ನೋಡಿದರೆ ಹೇಳುವವರು ಕೇಳುವವರು ಇಲ್ಲ ಎಂಬ ಅಭಿಪ್ರಾಯ ಕಂಡುಬರ ತ್ತದೆ.

ಇವತ್ತು 18 ಸಾವಿರ ಲೂಮುಗಳನ್ನು ಕೆಲಸಮಾಡುವುದಕ್ಕೆ ಒದಗಿಸಿಕೊಟ್ಟಿದ್ದಾರೆ. ಒಂದು ಸಹಸ್ರ ರೂಪಾಯಿ ಹಣವನ್ನು ಅವರಿಗೆ ಸಾಲವಾಗಿ ಕೊಡುತ್ತಾ ಇದ್ದಾರೆ. ಕೊಡುವ ಕಾಲದಲ್ಲಿ 850 ರೂಪಾಯಿಗಳವರೆಗೆ ಉಪಕರಣಗಳನ್ನು ಕೊಟ್ಟು, 150 ರೂಪಾಯಿಗಳವರೆಗೆ ಕ್ಯಾಷ್ ಮೂಲಕ ಕೊಡುತ್ತಾರೆ. 850 ರೂಪಾಯಿ ಉಪಕರಣಗಳ ಮೂಲಕ ಕೊಡುವ ಕಾಲದಲ್ಲಿ ರಾಟೆ, ಮಗ್ಗ, ವಗೈರೆ ಸಾಮಾನುಗಳನ್ನು ಕೊಡುತ್ತಾ ಇದ್ದರು. ನೇಕಾರರು ಏನು ಹೇಳುತ್ತಾರೆಂದರೆ: ಸಹಸ್ರ ರೂಪಾಯಿ ಕೊಟ್ಟಲ್ಲ, ನಮಗೆ ಕೊಟ್ಟಿರುವುದು 150 ರೂಪಾಯಿ, 850 ರೂಪಾಯಿಗಳ ಉಪಕರಣಗಳನ್ನು ಮಾಡಿಸಿ ಒದಗಿಸಿಕೊಟ್ಟಿರುವುದನ್ನು ನಾವು 300 ರೂಪಾಯಿಗೆ ಮಾಡಿಸಿಕೊಳ್ಳ ಬಹುದೆಂದು. ಯಾರಿಂದರೋ ಕೊಟೇಷನ್ ತರಿಸಿಕೊಂಡು, ಏಜನ್ಸಿಯ ಮೂಲಕ ಉಪಕರಣಗಳನ್ನು ತರಿಸಿಕೊಂಡು ಯಾರೋ ಹೆಚ್ಚಿನ ಲಾಭ ಹೊಡೆಯುತ್ತಿದ್ದಾರೆ, ಆದ್ದರಿಂದ ಈ 850 ರೂಪಾಯಿ ಯನ್ನು ವಾಪಸು ಕೊಡುವುದಿಲ್ಲ ಎಂದು ಪ್ರೈಮರಿ ಸೊಸೈಟಿಗೆ ಹೇಳುತ್ತಾ ಇದ್ದಾರೆ. ಒಂದು ರಾಟೆಗೆ 150 ರೂಪಾಯಿ ಚಾರ್ಜು ಮಾಡಿದ್ದಾರೆ. ವಿಚಾರಮಾಡಿ ನೋಡಿದರೆ ಆ ರಾಟೆಗೆ 15-20 ರೂಪಾಯಿ ಆಗುತ್ತದೆ; ಒಂದು ಸೈಕಲ್ ಚಕ್ರಕ್ಕೆ ಮರದ ಪಟ್ಟಿಯನ್ನು ಹಾಕಿ ಅದನ್ನು ತಿರುಗಿಸು ವಂತೆ ಮಾಡಿರುತ್ತಾರೆ. ಅದೇ ರಾಟೆ, ಅದಕ್ಕೆ 50 ರೂಪಾಯಿ ಚಾರ್ಜುಮಾಡಿದ್ದಾರೆ. ಯಾರೋ ಮಾಡಿದ ಪಾಪಕ್ಕೆ ಬಡ ನೇಕಾರನು ಜಾಸ್ತಿಹಣ ತೆರಬೇಕು, ಅವನು ಹೆಸರನ್ನು ದುರುಪಯೋಗ

(ಶ್ರೀ ಎಚ್. ಡಿ. ದೇವೇಗೌಡ)

ಮಾಡಿಕೊಳ್ಳುತ್ತಿದ್ದಾರೆ. ಅವನ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಬದಲಾಗಿ ಅವನನ್ನು ಶೋಷಣೆ ಮಾಡುತ್ತಿದ್ದಾರೆ ಎಂದು ಸ್ಪಷ್ಟವಾಗಿ ಕಾಣುತ್ತಿದೆ.

ಈ ಸಿಲ್ಕ್ ಡಿಸ್ಟ್ರಿಬ್ಯೂಷನ್ನದು ಒಂದು ಹಿನ್ನೆರಿ. ಅದರ ಬಗ್ಗೆ ಮಂತ್ರಿಗಳು ಈಗ ಸಾಕಷ್ಟು ವ್ಯವಸ್ಥೆ ಮಾಡುತ್ತಾ ಇದ್ದಾರೆಂದು ನನಗೆ ತಿಳಿದು ಬಂದಿದೆ. ಇದು ಸ್ವಾಗತಾರ್ಹ ವಿಚಾರ. ಈ ಸಿಲ್ಕು ವಿಲೇವಾರಿಯನ್ನು ಡೈರೆಕ್ಟೊರೇಟ್ ಮಾಡುತ್ತಾ ಇರುತ್ತದೆ. ಡೈರೆಕ್ಟರುಗಳ ವಿಷಯದಲ್ಲಿ ನಾನು ಪೈಯಕ್ತಿಕವಾಗಿ ಯಾವ ತರಹ ದ್ವೇಷ ಮಾಡುತ್ತಾ ಇಲ್ಲ. ನನಗೆ ತಿಳಿದಿರತಕ್ಕಂಥ ಕೆಲವು ಅಂಶಗಳ ಜೊತೆಗೆ ಪ್ರೈಮರಿ ಸೊಸೈಟಿಯಿಂದ ಬಂದು ಹೇಳಿರತಕ್ಕಂಥವರ ದೂರನ್ನು ತಮ್ಮ ಮುಂದಿಡುತ್ತೇನೆ. ಪ್ರತಿ ಡಿಲ್ಲೆಯನ್ನೂ ಒಬ್ಬ ಡೈರೆಕ್ಟರು ನಂಸ್ಥೆಯಲ್ಲಿ ಪ್ರತಿನಿಧಿನತಕ್ಕಂಥ ವಿಷಯ ಸಾಮಾನ್ಯವಾಗಿದೆ. ಅಲ್ಲಿ ಸಾಮಾನ್ಯವಾಗಿ ಡೈರೆಕ್ಟರಾಗಿರತಕ್ಕಂಥವರು ಪ್ರೈಮರಿ ಸೊಸೈಟಿ ಪ್ರೆಸಿಡೆಂಟ್ ಆಗಿರುತ್ತಾರೆ. ಯಾವುದಾದರೂ ಡಿಲ್ಲೆಗೆ ಬರತಕ್ಕಂಥ, ನಂಸ್ಥೆಗೆ ಬರತಕ್ಕಂಥ ಸಿಲ್ಕನ್ನು ಈ 18 ಜನ ಡೈರೆಕ್ಟುರುಗಳು ಡಿಸ್ಟ್ರಿಬ್ಯೂಟ್ ಮಾಡುತ್ತೇವೆಂದು ತೆಗೆದುಕೊಂಡು, ಇಲ್ಲಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಾ ಇದ್ದಾರೆ. ಯಾರೂ ಮಾರುತ್ತಾ ಇಲ್ಲ ಎಂದು ನ್ಪಷ್ಟಪಡಿಸುವುದಾದರೆ, ನಾನು ಅವರಿಗೆ ಅಂಕಿಅಂಶಗಳ ಸಹಿತ ಪ್ರೂವ್ ಮಾಡುತ್ತೇನೆ. ಯಾರಿಗೂ ಬೇಕಾದಂಥ ಸಿಲ್ಕು ಬಂದಿಲ್ಲ. ಅವರುಗಳು ಸಿಲ್ಕನ್ನು ಟ್ರಾನ್ಸ್‌ಪೋರ್ಟ್ ಮಾಡಿದ್ದಕ್ಕೆ ರುಜುಪಾತು ಇಟ್ಟುಕೊಂಡಿದ್ದಾರೆಯೆ? ಯಾವ ರೀತಿ ಜಿಲ್ಲಾ ಹೆಡ್‌ಕ್ವಾರ್ಟರಿಗೆ, ನಂಘಗಳಿಗೆ ಅದನ್ನು ಟ್ರಾನ್ಸ್‌ಪೋರ್ಟ್ ಮಾಡಿದ್ದಾರೆ? ಇಲ್ಲಿಯವರು ತೆಗೆದುಕೊಂಡಂಥ ಸಿಲ್ಕನ್ನು, ಪ್ರೈಮರಿ ಸಹಕಾರ ನಂಘಗಳ ಹೆಸರಿನಲ್ಲಿ ಪಡೆದ ಕೋಟ ಸಿಲ್ಕನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಿರುತ್ತಾರೆ. ಬಡ ನೇಕಾರರ ಹೆಸರನ್ನು ಹೇಳಿ ಎಷ್ಟರಮಟ್ಟಿನ ಹೇಯವಾದಂಥ ಸ್ಥಿತಿಗೆ ಹೋಗಿದ್ದಾರೆಂದು ವಿವರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಸರಕಾರ ಗಮನ ತೆಗೆದುಕೊಂಡು ಈ ವಿಲೇವಾರಿಯನ್ನು ಒಂದು ಸರಿಯಾದ ರೀತಿಯಲ್ಲಿ, ಒಂದು ವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಬೇಕು.

ಬಹುಶಃ ಆಡಳಿತವರ್ಗ ಅಪರಾಧ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಸ್ವಲ್ಪ ಹೆಚ್ಚುಕಡಮೆ 30 ಸಹಸ್ರ ರೂಪಾಯಿ ಟಿ.ಎ. ಡ್ಯಾ ಮಾಡುತ್ತಾರೆ. ನಂಘದ ಅಧ್ಯಕ್ಷರು 20-25 ಸಹಸ್ರ ರೂಪಾಯಿ ಟಿ.ಎ. ಒಂದು ವರ್ಷಕ್ಕೆ ಡ್ರಾ ಮಾಡಿದ್ದಾರೆ. ಏಳು ವರ್ಷಗಳಿಂದ ಸ್ಟೇಟ್ ನಂಸ್ಥೆಗೆ ಅಧ್ಯಕ್ಷರಾಗಿದ್ದಾರೆಂದರೆ ಇದರ ಅರ್ಥವೇನು? ಸುಮ್ಮನೆ ಹಣ ಪೋಲಾಗುತ್ತಿದೆ. ಸ್ವಲ್ಪ ಹೆಚ್ಚುಕಡಮೆ 2 ಲಕ್ಷ ರೂಪಾಯಿ ಚಿಲ್ಲರೆ ಆಡಳಿತಮಂಡಲಿಯ ಡೈರೆಕ್ಟುರುಗಳಿಗೆ T.A. ರೂಪದಲ್ಲಿ ಖರ್ಚಾಗುತ್ತಿರುವುದನ್ನು ಸರಕಾರ ಮತ್ತು ಇಲಾಖೆ ಗಮನ ಕೊಡದೆಹೋದರೆ, ನಿಜವಾಗಿಯೂ ಬಡ ನೇಕಾರರ ಕಷ್ಟ ಸುಧಾರಿಸುವುದಿಲ್ಲ. ಆದ್ದರಿಂದ ಸರಕಾರ ಈ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಪಕ್ಕದ ಮದ್ರಾಸು ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಮಾಲನ್ನು ಉತ್ಪತ್ತಿ ಮಾಡುತ್ತಾರೆ. ನಮ್ಮ ಸ್ಟೇಟಿನಲ್ಲಿ ನೀವು ಇಷ್ಟೆಲ್ಲಾ ಉಪಕಾರ ಮಾಡಿ, ಸಹಾಯ ಮಾಡಿದ್ದರೂ, 24 ಲಕ್ಷ ರೂಪಾಯಿ ಸಾಲ, ಎರಡು ಲಕ್ಷ ರೂಪಾಯಿ ಸಬ್‌ಸಿಡಿ, ಮೂರುವರೆ ಲಕ್ಷ ರೂಪಾಯಿ ಅಕ್ಯುಮುಲೇಟೆಡ್ ಸ್ಟಾಕ್ ಕೊಟ್ಟು, 10 ಲಕ್ಷ ಬಡ ನೇಕಾರರಿಗೆ ಎಳ್ಳಷ್ಟೂ ಉಪಯೋಗವಾಗದೆ ಇರುವುದು ಆಡಳಿತ ನಡೆಸುವವರಿಗೆ ನಾಚಿಕೆಗೇಡಿನ ಪ್ರಸಂಗ. ಇದು ಮಾಯಾಬಜಾರ್. ಇವರು ಬಹಳ ಹೀನಕರವಾದ ವ್ಯವಹಾರವನ್ನು ನಡೆಸುತ್ತಿದ್ದಾರೆ. ಪಕ್ಕದ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ಮಾಲನ್ನು ಪ್ರೊಡ್ಯೂಸ್ ಮಾಡಿ, ಕಾಟನ್ ಮತ್ತು ಎಫೆಕ್ಸ್ ಸೊಸೈಟಿಗಳು ಎಕ್ಸ್‌ಪೋರ್ಟ್ ಮಾಡುತ್ತಿರುವಾಗ, ನಮ್ಮ ರಾಜ್ಯದಲ್ಲಿ ನಾಲ್ಕು ಆಣೆ ಮಾಲನ್ನೂ ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡತಕ್ಕಂಥ ಯೋಗ್ಯತೆ ಇಲ್ಲವೆನ್ನುವುದು ನಮ್ಮೆಲ್ಲರಿಗೂ ಅವಮಾನಕರವಾದ ವಿಷಯ. ಸರಕಾರ ಇದರ ಕಡೆ ತೀವ್ರ ಗಮನ ಕೊಡಬೇಕಾಗಿದೆ.

ಈ ವಿಚಾರವನ್ನು ಎನ್‌ಕ್ವಯರಿ ಆಫೀಸರ್ ಒಬ್ಬರನ್ನು ಅಪಾಯಿಂಟ್ ಮಾಡಿ, ಇದನ್ನು ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸಬೇಕು. ಇದನ್ನು ಈಗಲೇ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇವತ್ತು ಹೇಪರಿನಲ್ಲಿ ಓದಿದೆ: ಖಾದಿ ಬೋರ್ಡಿನಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗಿದ್ದು ಲೆಕ್ಕ ಸಿಕ್ಕಿಲ್ಲ ಎಂದು. ಹೀಗೆ, ಸಾರ್ವಜನಿಕರ ಹಣವನ್ನು, ಬಡಬೋರೇಗೌಡನ ದುಡ್ಡನ್ನು, ಅನೇಕ ರೀತಿಯಲ್ಲಿ ಟ್ಯಾಕ್ಸು ವಗೈರೆ ಹಾಕಿ ವಸೂಲು ಮಾಡಿದ ಹಣವನ್ನು, ಆಡಳಿತ ನಡೆಸತಕ್ಕಂಥವರು ಮನಸ್ಸಿಗೆ ಬಂದಹಾಗೆ ಖರ್ಚುಮಾಡಿ ವ್ಯವಹರಿಸುವುದಾದರೆ ಇದು ತಲೆಬಗ್ಗಿಸಬೇಕಾದ ವಿಚಾರ. ಇದರ ಬಗ್ಗೆ ಒಳಹೊಕ್ಕು ವಿಚಾರ ನಡೆಸಬೇಕು. ಒಬ್ಬ ಐ.ಸಿ.ಎಸ್ ಆಫೀಸರನ್ನು ಎನಕ್ವಯರಿ ಆಫೀಸರರಾಗಿ ಅಪಾಯಿಂಟ್ ಮಾಡಿ ವಿಮರ್ಶೆ ಮಾಡಿಸಿ, ಲೋಪದೋಷಗಳಿಗೆ ಯಾರು

ಕಾರಣರು ಎಂದು ನಿಗದಿ ಮಾಡಬೇಕು ; ಜವಾಬ್ದಾರರಾದವರು ಯಾರೇ ಆಗಲಿ—ಅವರು ಅಧಿಕಾರಿ ವರ್ಗಕ್ಕೇ ಸೇರಿರಲಿ, ಆಡಳಿತ ವರ್ಗಕ್ಕೇ ಸೇರಿರಲಿ, ಅವರು ಯಾರು ಎಂಬುದನ್ನು ನಿಗದಿ ಮಾಡ ಬೇಕು. ಬೇಗ ವಿಚಾರಣೆ ನಡೆಸಿ, ಅನ್ಯಾಯವಾಗತಕ್ಕಂಥದ್ದನ್ನು ತಡೆಗಟ್ಟುವುದು ಒಳ್ಳೆಯದು.

ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧ್ಯಕ್ಷರೆ, ನನ್ನ ಮಾನ್ಯ ಮಿತ್ರರಾದ ಶ್ರೀ ದೇವೇಗೌಡರು ಮಾನ್ಯಮಂತ್ರಿಗಳ ಗಮನವನ್ನು ಹತ್ತಿಕೈಮಗ್ಗದ ನೇಕಾರರ ಸಹಕಾರ ಸಂಘದ ಆಡಳಿತದ ಬಗ್ಗೆ ಹರಿಸುತ್ತಾ ಹೇಳಿದ್ದನ್ನು ಕೇಳಿ, ನರಕ ದ ಮೈಸೂರಿನಲ್ಲಿದೆಯೋ ಅಥವಾ ಬೇರೆ ಕಡೆ ಹೋಗಿದೆಯೋ ಎಂಬ ಅನುಮಾನ ಬಂದಿದೆ. ಸಾವಿರಾರು ರೂಪಾಯಿಗಳ ನಷ್ಟವಾಗಿದೆ ಎಂದು ಕೇಳಿದಾಗ, ಏನೂ ಲೆಕ್ಕಪತ್ರವಿಲ್ಲ, ಇಷ್ಟು ಲೋಪದೋಷಗಳಿದ್ದರೂ, ಹೇಳುವವರು ಕೇಳುವವರು ಈ ಆಡಳಿತ ನಡೆಸತಕ್ಕವರಿಗಿಲ್ಲ ಎಂದು ಸ್ಪಷ್ಟವಾಯಿತು. ತಮ್ಮ ಪಕ್ಷಕ್ಕೆ ಸೇರಿದಂಥ ಒಬ್ಬ ಮನುಷ್ಯ ಸುಖವಾಗಿ ಜೀವನ ಮಾಡಿಕೊಂಡು, ಎಲ್ಲೋ ಬಿಟ್ಟಿ ಮನಸ್ಸಿ ತಿರುಗಾಡುವುದಕ್ಕೆ ಈ ಸಂಸ್ಥೆಗಳಿವೆಯೆ ? ಅವನಿಗೆ ಕಾರು, ಅವನ ಮನೆ ವೈಖರಿ, ಇವೆಲ್ಲಕ್ಕೂ ಟಿ.ಎ. ಒಂದು ವರ್ಷಕ್ಕೆ 20 ಸಾವಿರ ರೂಪಾಯಿಯೆ ? ಎಷ್ಟು ಸಂಸಾರಗಳನ್ನು ನಮ್ಮ ದೇಶದಲ್ಲಿ ಹಾಳುಮಾಡಬೇಕೆಂದು ಈ ನೇಕಾರರ ಸಹಕಾರ ಸಂಘ ಗಳ ಡೈರೆಕ್ಟರು ಹೊರಟಿದ್ದಾರೆ ? ಆ ನೇಕಾರರ ಸಂಸಾರಗಳ ಮನೆ ಮಠಗಳನ್ನು ಸುಟ್ಟು ಬೂದಿ ಮಾಡಿ, ಆ ಬೂದಿಯನ್ನು ತೆಗೆದುಕೊಂಡು ಅವರ ಹಣೆಗೆ ಹಚ್ಚಿಕೊಂಡರೆ ಅವರಿಗೆ ಆನಂದವೆ ? ಈ ರೀತಿಯಾದರೆ ಸಹಕಾರ ಸಂಘಗಳು ಯಾವ ರೀತಿ ಮುಂದುವರಿಯಬೇಕೆಂಬುದನ್ನು ತಾವೇ ಯೋಚಿಸ ಬೇಕು. ಇದರ ಅಧ್ಯಕ್ಷರಿಗೆ 20 ಸಾವಿರ ರೂಪಾಯಿ ಟಿ.ಎ., ಡೈರೆಕ್ಟರುಗಳಿಗೆ 10 ಸಾವಿರ ರೂಪಾಯಿ ಟಿ.ಎ. ಒಂದು ರಾತ್ರಿಗೆ 50 ರೂಪಾಯಿ ಚಾರ್ಜು ಮಾಡುತ್ತಾರೆ. ಅದು ಒಂದು ಸೈಕಲ್ ಡಕ್ಕ, ಅದು ಎರಡು ರೂಪಾಯಿಗೆ ಸಿಕ್ಕುವಂಥದು. ಇದಕ್ಕೆ 50 ರೂಪಾಯಿ ಸಬ್‌ಸಿಡಿ ಕೊಡುತ್ತೇವೆಂದು ಹೇಳುತ್ತಾರೆ. ಇದಕ್ಕೆ ಏಜನ್ಸಿ ಮಾಡಿಕೊಂಡು, ಎರಡು ರೂಪಾಯಿ ರಾತ್ರಿಗೆ ಕೊಟ್ಟು, ಇನ್ನು 48 ರೂಪಾಯಿಗಳಲ್ಲಿ ಭಾಗ ಮಾಡಿಕೊಳ್ಳುತ್ತಾರೆ. ಇಂಥ ಕೃತ್ಯಗಳಿಗೆ ತಕ್ಕ ಶಾಸ್ತಿ ಮಾಡದಿದ್ದರೆ ನಮ್ಮ ದೇಶ ಯಾವರೀತಿ ಮುಂದುವರಿಯಬೇಕು ? ನೇಕಾರರು ಎಷ್ಟುಮಟ್ಟಿಗೆ ಮುಂದುವರಿಯಬಹುದು? ನನ್ನ ಸಲಹೆ ಏನೆಂದರೆ ವಿಚಾರಣೆ ನಡೆಸುವುದಕ್ಕೆ ಮುಂಚೆ ಈ ಡೈರೆಕ್ಟರುಗಳನ್ನು ಆಫೀಸಿನಿಂದ ಹೊರಗೆ ಹಾಕಬೇಕು. ಮೊದಲು ಕೋರ್ಟಿನಲ್ಲಿ ಅವರ ಮೇಲೆ ಕೇಸು ಹಾಕಿ. ಕೆಲವರನ್ನಾದರೂ ಜೈಲಿಗೆ ಕಳುಹಿಸಿ ; ಹೀಗೆ ಮಾಡಿದರೆ ನಮ್ಮ ದೇಶದಲ್ಲಿ ಇಂಥ ತಪ್ಪು ಮಾಡುವವರಿಗೆ ಮಾದರಿ ಶಿಕ್ಷೆ ಯಾಗಿರುತ್ತದೆ. ಇನ್ನೂ 20 ಸಾವಿರ ರೂಪಾಯಿ ಖರ್ಚಾದರೂ ಪರವಾಗಿಲ್ಲ, ಮೊದಲು ಕೆಲವರನ್ನು ಜೈಲಿಗೆ ಕಳುಹಿಸಬೇಕು.

ಮಾನ್ಯ ಮಂತ್ರಿಗಳು ಅಧಿಕಾರದಲ್ಲಿ ಉಳಿಯಬೇಕಾದರೆ ಇಂಥ ಕೆಲವು ಜನರನ್ನು ಹೊರಗಡೆ ಮೇಯಿಸಿಕೊಂಡು ತಮಗೆ ಸಹಾಯಕರಾಗಿ ಇಟ್ಟುಕೊಂಡಿರಬೇಕು ಎನ್ನುವ ದೃಷ್ಟಿಯನ್ನಿಟ್ಟು ಕೊಂಡಿದ್ದಾರೆ. ಶಾಶ್ವತವಾಗಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಮಂತ್ರಿಗಳಾಗಿ ಉಳಿದು ಕೊಂಡು ಹೋಗಬೇಕು ಎಂಬ ಆಸೆಯಿಂದ ಕೂಡಿದ್ದಾರೆಂದು ಕಾಣುತ್ತದೆ. ಅಧಿಕಾರದಲ್ಲಿದ್ದಾಗ ಕೆಲವು ದಿನಗಳಾದರೂ ದಕ್ಷತೆಯಿಂದ ಆಡಳಿತ ಮಾಡಿ ದೇಶಕ್ಕೆ ಅಪಕಾರವಾಗದಂತೆ ಇತರರಿಗೆ ಮಾದರಿಯಾಗಿರಬೇಕು, ಶ್ರೀಮಾನ್ ಮಲ್ಲಪ್ಪನವರ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು ಎಂದು ಇದ್ದರೆ—ಕೆಟ್ಟದ್ದನ್ನು ಮಾಡಲಿ, ಒಳ್ಳೆಯದನ್ನು ಮಾಡಲಿ ಹೆಸರು ಚರಿತ್ರೆಯಲ್ಲಿ ಉಳಿಯುತ್ತದೆ, ವಿಧಾನಸೌಧ ಪ್ರಕರಣ ಮುಂತಾದುವುಗಳ ಹಾಗೆ—ಅವರು ನಿರ್ದಾಕ್ಷಿಣ್ಯವಾಗಿ ವರ್ತಿಸಿ ತಪ್ಪಿತಸ್ಥ ರನ್ನು ಶಿಕ್ಷೆಗೆ ಗುರಿಮಾಡಬೇಕು. ಇದೇ ತರಹ ಮೈಸೂರು ಸಂಸ್ಥಾನದಲ್ಲಿ ನಬ್ಬಿಡಿ ಪಡೆಯತಕ್ಕ ಅನೇಕ ಯೋಜನೆಗಳು ನಿಮ್ಮ ಅಧಿಕಾರದಲ್ಲಿವೆ. ಪ್ರತಿ ವರ್ಷ 60 ಸಾವಿರ ರೂಪಾಯಿ, 80 ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಹೀಗೆ ದುರುಪಯೋಗವಾಗಿದೆ ಎಂದು ಆರೇಳು ವರ್ಷಗಳಿಂದ ಆಡಿಟ್ ವರದಿಗಳಲ್ಲಿ ಬರುತ್ತಿದೆ. ಸರ್ಕಾರ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದೆಯೇ ಎನ್ನುವುದು ನಮಗೆ ಗೊತ್ತಾಗಿಲ್ಲ.

ಈ ಮಹನೀಯರ ಹುಟ್ಟಿದ ಹಬ್ಬವನ್ನು ಆಚರಿಸಲು ಹೈಮಾರಿ ಸೊಸೈಟಿಗಳಿಂದ ಚಂದ ಹಣ ವನ್ನು ವಸೂಲ್ಮಾಡಿ ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು. ನೀವೂ ಸಹ ಆ ಸಮಾರಂಭಕ್ಕೆ ಹೋಗಿದ್ದು ಚಿರಂಜೀವಿಯಾಗಿ ಬಾಳಿರೆಂದು ಆಶೀರ್ವದಿಸಿದಿರಿ. ಎಷ್ಟು encouragement ಕೊಡುತ್ತೀರಿ ಎನ್ನುವ ವಿಷಯ ಇದರಿಂದ ವ್ಯಕ್ತವಾಗುತ್ತದೆ. ಇವರು ಇನ್ನೂ ಉಳಿದುಕೊಳ್ಳಲಿ, ಚಿರಂಜೀವಿಯಾಗಿ ಬಾಳಲಿ ಎನ್ನುವ ಇಚ್ಛೆ ಸರ್ಕಾರದಲ್ಲಿ ಹೆಚ್ಚಿದರೆ ಕೊನೆಗೆ—ಹಿಂದೆ ರಾಜಮಹಾರಾಜರುಗಳಿದ್ದರು—ಸಣ್ಣಪುಟ್ಟ ರಾಜರುಗಳು ದೇಶದಲ್ಲಿ ಅಭಿವೃದ್ಧಿಯಾಗು ತ್ತಾರೆ. ಇದನ್ನು ತಾವು ಯೋಚನೆ ಮಾಡಬೇಕು.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಸಿಲ್ಕ್ ವಿಷಯದಲ್ಲಿ ಮಾನ್ಯ ಮಿತ್ರರು ಹೇಳಿದರು. ಎಲ್ಲಿ ರೇಷ್ಮೆಯನ್ನು ಉಪಯೋಗಿಸತಕ್ಕ ಮಗ್ಗಗಳಿವೆಯೋ ಆ ಊರುಗಳಲ್ಲಿ ರೇಷ್ಮೆಯನ್ನು ಹಂಚಿರುವುದಾಗಿ ಗೊತ್ತಾಗಿದೆ. ಇದನ್ನು ಹೇಗೆ ಹಂಚಿದರು ಎಂದು ಯೋಚನೆ ಮಾಡಬೇಕು. ಇದೆಲ್ಲ ಏನಾಯಿತು ? ಈ ರೇಷ್ಮೆಯನ್ನೆಲ್ಲಾ ಡೈರೆಕ್ಟರುಗಳು ಹಂಚಿಕೊಂಡರು. ಇಂಥದ್ದನ್ನೆಲ್ಲಾ ಇನ್‌ವೆಸ್ಟಿಗೇಟ್ ಮಾಡಿ ದೇಶಕ್ಕೆ ತೋರಿಸಿ ಅದಕ್ಕೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮತೆಗೆದ ಕೊಳ್ಳಬೇಕು. ನಿಮ್ಮವರನ್ನು ಕುಳ್ಳಿರಿಸಿ ಇದೂ ಒಂದು ನಾಟಕವನ್ನು ಆಡುತ್ತೀರಿ. ಈಗ ನಡೆಯುತ್ತಿರುವುದನ್ನು ನೋಡಿದರೆ ನೀವೂ ಸಹ ಇದರ ಸಖಿಯನ್ನು ಊಟ ಮಾಡುತ್ತಿದ್ದೀರಿ ಎನ್ನುವ ಅನುಮಾನ ಬರುತ್ತದೆ. ಈ ದೃಷ್ಟಿಯಿಂದ ಹೆಚ್ಚಾಗಿ ಹೇಳಬೇಕಾಗಿಲ್ಲ.

ನೇಕಾರರ ಹೆಸರಿನಲ್ಲಿ, ಅವರಿಗೆ ಸಹಾಯ ಮಾಡಲು ಸರ್ಕಾರ ಕೊಡುವ ಹಣವನ್ನು, ಜನಗಳಿಂದ ತೆರಿಗೆಯ ರೂಪದಲ್ಲಿ ವಸೂಲ್ಮಾಡಿ ಕೊಟ್ಟ ಹಣವನ್ನು ಅವರಿಗೆ ಕೊಡದೆ ತಿಂದುಹಾಕಿದ್ದಾರೆ. ಅವ ಕಾಶವಿದ್ದರೆ ಯಾವ ಸ್ಥಾನಕ್ಕಾದರೂ ಏಳಿಯಬಹುದು ಎನ್ನುವುದನ್ನು ಇದು ತೋರಿಸುತ್ತದೆ. ಈ ಎಲ್ಲ ವಿಚಾರಗಳನ್ನೂ ತನಿಖೆ ಮಾಡಿ ಈಗಿನ ಅಧಿವೇಶನ ಮುಗಿಯುವುದರೊಳಗಾಗಿ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಜೈಲಿಗೆ ಕಳಿಸುವುದಕ್ಕಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ; ಅವರಿಗೆ ತಕ್ಕ ಶಿಕ್ಷೆ ಮಾಡುತ್ತೀರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ಕೈಗಾರಿಕೆ ಮತ್ತು ವಾಣಿಜ್ಯ ಶಾಖಾ ಮಂತ್ರಿಗಳು).—ಸ್ವಾಮಿ, ಈ ಸಂಘದ ಕೆಲಸ ತೃಪ್ತಿಕರವಾಗಿ ನಡೆದಿಲ್ಲವೆಂದು ಹೇಳತಕ್ಕದ್ದನ್ನು ನಾನು ಒಪ್ಪಿಕೊಂಡಿದ್ದೇನೆ. ಅದರ ಸಂಬಂಧವಾಗಿ ಮಾನ್ಯ ಸದಸ್ಯರು ತಂದಂಥ ಒಂದು ಪ್ರಶ್ನೆಗೆ ಉತ್ತರಕೊಡುವಾಗ ನಾನು ಒಪ್ಪಿಕೊಂಡಿದ್ದೇನೆ, ತೃಪ್ತಿಕರವಾಗಿಲ್ಲ ಎಂದು. ಇದರಲ್ಲಿ 1961-62ರವರೆಗೆ ಲೆಕ್ಕ ಅಜಮಾಯಿಷಿ ಯಾಗಿದೆ. ಅಲ್ಲಿಯವರೆಗೆ ಕಡಮೆ ಬಂದಿರತಕ್ಕದ್ದು 86, 267, ರೂಪಾಯಿ 79 ನಯೇಪೈಸೆ. ಇಷ್ಟು ಹಣ ಗೈರುಪಿರೆಯಾಗಿದೆ, ಲೆಕ್ಕದಲ್ಲಿಲ್ಲ. ಇದಕ್ಕೆ ಯಾರು ಹೊಣೆಗಾರರು ಎಂದು ನಿಶ್ಚಯಮಾಡಿ, ಅವರಿಂದ ಹಣವನ್ನು ವಸೂಲ್ಮಾಡಿಕೊಂಡು, ತಪ್ಪು ಮಾಡಿದವರನ್ನು ಶಿಕ್ಷೆ ಮಾಡಬೇಕು ಇದರ ಬಗ್ಗೆ ಪರಿಶೀಲನೆಯಾಗಬೇಕು ಎಂದು ಈಗತಾನೇ ನೇಮಕವಾಗಿರುವ Joint Director of Industries and Commerce ಅವರಿಗೆ ವಿಧಾಯಕಮಾಡಿದೆ. ಈಗ ಅಜಮಾಯಿಷಿ ನಡೆಯುತ್ತಿದೆ. ಕೆಲವು ಜನರ ಮೇಲೆ ಕ್ರಿಮಿನಲ್ ಕೇಸಾಗಿದೆ, ಕೆಲವು ಜನರ ಮೇಲೆ arbitration ಆಗಿ ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಏರ್ಪಾಡಾಗಿದೆ...

Sri H. D. DEVE GOWDA.—Does it include the working capital and the amount due to the primary Co-operative Societies ?

ಶ್ರೀ ಕೆ. ಮಲ್ಲಪ್ಪ.—ಲೆಕ್ಕ ಪತ್ರಗಳ ಆಡಿಟ್ ಆಗಿದೆ, Investigation ಆಗಬೇಕು ಎಂದು ನಾನು ಒಪ್ಪಿಕೊಂಡಿದ್ದೇನೆ. ಕೆಲಸ ತೃಪ್ತಿಕರವಾಗಿ ನಡೆದಿಲ್ಲವೆಂದು ಕೂಡ ಒಪ್ಪಿಕೊಂಡಿದ್ದೇನೆ. ಯಾರು ಯಾರು ಎಷ್ಟರಮಟ್ಟಿಗೆ ಹೊಣೆಗಾರರೆನ್ನುವುದನ್ನು ತಿಳಿಯಲು ಆಡಿಟ್ ಆದಮೇಲೆ investigation ಮಾಡಿ ವಿಚಾರಣೆ ನಡೆಯಬೇಕಾಗಿದೆ. ಅದನ್ನು ಮಾಡಬೇಕು. ಈಗ ನೇಮಕವಾಗಿರತಕ್ಕ Industries and Commerce Joint Director ಅವರಿಗೆ ಈ ಕೆಲಸವನ್ನು ವಹಿಸಿದ್ದೇವೆ. ಆ ತನಿಖೆಯಿಂದ ಏನು ಕಂಡುಬರುತ್ತದೆ, shortage ಆಗಿರುವುದಕ್ಕೆ ಯಾರು ಹೊಣೆಗಾರರು, ಅದು ಕೈತಪ್ಪಿಹೋಗಿದೆಯೇ ಅಥವಾ ಗತಾವೆನಿಂದ ಹಾಗೆ ನಡೆದಿದೆಯೇ ಎಂದು ನೋಡಬೇಕು. ಒಂದು ವೇಳೆ ಗತಾವೆನಿಂದ ಆಗಿದ್ದರೆ, ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನ ತೆಗೆದು ಕೊಳ್ಳಬೇಕು. ಯಾವ ಒಂದು ಮುರಾಜಿಗೂ, ಪ್ರಭಾವಕ್ಕೂ ಒಳಗಾಗದೆ ಗತಾವೆನಿಸಿಕೊಂಡಿರತಕ್ಕವರ ಮೇಲೆ ಕ್ರಿಮಿನಲ್ ಕೇಸು ಕೂಡ ಮಾಡುತ್ತೇವೆ.

ಇನ್ನು 1962-63ರ ಲೆಕ್ಕ ಪತ್ರಗಳು ಆಡಿಟ್ ಆಗಬೇಕು. ಸಹಕಾರ ಸಂಘದ ವರ್ಷ ಜೂನ್ 30ಕ್ಕೆ ಮುಗಿಯುತ್ತದೆ. ಜುಲೈ ಒಂದರಿಂದ ಹೊಸ ವರ್ಷ ಪ್ರಾರಂಭವಾಗುತ್ತದೆ. ಅದರ ಲೆಕ್ಕಗಳು ಇನ್ನು up-to-date ಆಗಿಲ್ಲ. ಅದು ಮುಗಿಯಲು ಇನ್ನು ಒಂದು ತಿಂಗಳು ಬೇಕಾಗುತ್ತದೆ. ಅದರಮೇಲೆ provisional balance sheet ತಯಾರಾಗಿ ರಿಜಿಸ್ಟ್ರಾರ್ ಅವರಿಗೆ ಕಳಿಸಿದ ನಂತರ ಲೆಕ್ಕಗಳ ಆಡಿಟ್ ಆಗಬೇಕು. ಅದುವರೆಗೂ ಎಷ್ಟು ಹೆಚ್ಚುಕಡಮೆಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ಇಷ್ಟು ಭರವಸೆಯನ್ನು ಕೊಡುತ್ತೇನೆ, ಯಾರೇ ಆಗಲಿ ಎಷ್ಟೇ ದೊಡ್ಡವರಾಗಲಿ, ಅಧಿಕಾರಿಗಳಾಗಲಿ,

ಖಾಸಗಿಯವರಾಗಲಿ, ಹಾಗೆ ಮಾಡಿದವರಿಗೆ ಶಿಕ್ಷೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಅದನ್ನು ಖಂಡಿತವಾಗಿ ಸರ್ಕಾರ ಮಾಡಿಯೇ ತೀರುತ್ತದೆಂದು ತಮ್ಮ ಮುಂದೆ ತಿಳಿಸುತ್ತಿದ್ದೇನೆ.

ಈ ಸಂಸ್ಥೆಯ ರಚನೆ ಮಾಡಿರುವಾಗಲೇ ಸರಿಯಾಗಿ ಆಗಿಲ್ಲ. ಈ organisation ಏನಿದೆ, ವ್ಯವಸ್ಥೆ ಏನಿದೆ ಅದು ಸರಿಯಾಗಿ ಆಗಿಲ್ಲ. ಇದನ್ನು ಕೇಂದ್ರದಲ್ಲಿ ಸ್ಥಾಪನೆ ಮಾಡುವುದಕ್ಕಿಂತ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು Marketing Society ಮಾಡಿ Federation of Societies, Apex Marketing Society ಎಂದು ಮಾಡಿದ್ದರೆ ಬಹಳ ಚೆನ್ನಾಗಿ ನಡೆಯುತ್ತಿತ್ತು. ಇದರಿಂದ looms ಹಂಚುವಿಕೆ, ಮಾಲುಗಳನ್ನು ಕೊಂಡುಕೊಳ್ಳತಕ್ಕದ್ದು ಇವೆಲ್ಲ ಬಹಳ ಚೆನ್ನಾಗಿ ನಡೆಯುತ್ತಿದ್ದುವು. ಅಲ್ಲಿ ಜನರ ಮೇಲ್ವಿಚಾರಣೆಯಲ್ಲಿ ಸೊಸೈಟಿ ಇರುವುದರಿಂದ ಈಗ ನಡೆದಿರುವಂಥ ಲೋಪಗಳು ಆಗುವುದಕ್ಕೆ ಅವಕಾಶವಿರುತ್ತಿರಲಿಲ್ಲ.

ಸ್ಟಾಕ್‌ನಲ್ಲಿ ತರದೆ ಇರತಕ್ಕವು ಎಷ್ಟೋ ಇವೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಹೋಳೆನರಸೀಪುರ ಸೊಸೈಟಿಯಿಂದ 1,200 ರೂಪಾಯಿ ಮಾಲನ್ನು ಕಳಿಸಿದ್ದರು. ಅದು ಸ್ಟಾಕ್ ಲೆಕ್ಕದಲ್ಲಿಲ್ಲ. ನಮಗೆ ಬಂದಿಲ್ಲವೆಂದು ಹೇಳುತ್ತಾರೆ. ಡೂಪ್ಲಿಕೇಟ್ ಇನ್‌ವಾಯಿಸ್ ಇವೆಲ್ಲ ಇರಬೇಕಾದರೆ ರೈಲ್ವೆ ರಸೀತಿ ಬಂದಿರಲೇಬೇಕು ಎನ್ನುವುದು ಸಾಮಾನ್ಯವಾದ ಅಭಿಪ್ರಾಯ. ಆದುದರಿಂದ ಮಾಲು ಬಂದಿರಬೇಕು. ಅದು ಕೈತಪ್ಪಿ ಬಿಟ್ಟು ಹೋಗಿದೆಯೇ ಎಂದು ಅಜಮಾಯಿಷಿ ಮಾಡುವುದಕ್ಕೆ ಹೇಳಿದ್ದೇನೆ. ಮತ್ತು ಹೊಳೆನರಸೀಪುರ ಸೊಸೈಟಿಗೆ ಏನು ಸಲ್ಲಿಕೆಯಾಗಬೇಕೋ ಅದನ್ನು ಕೊಡಬೇಕು ಎಂದು ಕೂಡ ತಿಳಿಸಿದ್ದೇನೆ. ಹೀಗೆ ಬಂದಂಥ ಮಾಲನ್ನು ಲೆಕ್ಕದಲ್ಲಿ ಬರೆಯದೆ, ಕೈಬಿಟ್ಟು ಹೋಗಿರುವುದು ಅಥವಾ ಉದ್ದೇಶ ಪೂರ್ವಕವಾಗಿ ಬಿಟ್ಟಿರುವುದು ಯಾವುದಾದರೂ ಇವೆಯೇ ಎಂಬ ಎಲ್ಲ ವಿಷಯಗಳನ್ನು ಅಜಮಾಯಿಷಿ ಮಾಡಬೇಕಾಗಿದೆ.

ಲೇವಾದೇವಿಯನ್ನು ಅವರಿಗೆ ಕೊಟ್ಟದ್ದು ಕೂಡ ತಪ್ಪು. Credit Societyಗಳ ಜವಾಬ್ದಾರಿಯಾದ ಸಾಲ ಕೊಡತಕ್ಕ ಮತ್ತು ಸಾಲವನ್ನು ವಸೂಲ್ಮಾಡತಕ್ಕ ಕೆಲಸವನ್ನು ಇದಕ್ಕೆ ವಹಿಸಿರುವುದು ಕೂಡ ರಚನಾ ದೃಷ್ಟಿಯಿಂದ ನೋಡಿದರೆ ತಪ್ಪು ಎಂದು ಹೇಳಬಹುದು. ಆ ವ್ಯವಹಾರವನ್ನು, ಲೇವಾದೇವಿಯನ್ನು ತಪ್ಪಿಸಿದ್ದೇನೆ. ಹೀಗೆಯೇ ಅನೇಕ ದೋಷಗಳಿವೆ.

Calendering Machine ಲಕ್ಷಾಂತರ ರೂಪಾಯಿ ಕೊಟ್ಟು ತೆಗೆದುಕೊಂಡಿರುವುದು ಸಹಜ. ಅದನ್ನು ಉಪಯೋಗಿಸದೆ ಹಾಗೆಯೇ ಇಟ್ಟುಕೊಂಡಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಲೈಸೆನ್ಸ್ ಇಲ್ಲದೆ, ಜಾಗವಿಲ್ಲದೆ ಹಾಗೆ ಮಾಡಿದ್ದಾರೆ. ಹೀಗೆಯೇ ಇನ್ನು ಅನೇಕ ಲೋಪ ದೋಷಗಳಿವೆ. ಕೆಲವು ಯಂತ್ರಗಳು ಉಪಯೋಗಿಸದೇ ಹಾಗೆಯೇ ಇರುವೆವೆಂಬುದು ಹೇಳುವುದನ್ನು ವಿಚಾರ ಮಾಡುತ್ತೇವೆ. ಇನ್‌ವೆಸ್ಟಿಗೇಷನ್ ಮಾಡುತ್ತೇವೆ ಮತ್ತು ಯಾವ ಕ್ರಮ ತೆಗೆದುಕೊಂಡು ಇಂಥಾದ್ದು ಮುಂದೆ ಆಗದ ಹಾಗೆ ಮಾಡಬಹುದೋ ಅದನ್ನು ಮಾಡುತ್ತೇವೆ. ಈ ಸೊಸೈಟಿ ಇರುವುದರಿಂದ ಯಾರ ಉದ್ಧಾರವಾಗಬೇಕೋ ಆ ನೇಕಾರರ ಉದ್ಧಾರ ವಾಡುವುದಕ್ಕೆ ಏನು ಮಾಡಬೇಕೋ ಅದನ್ನೆಲ್ಲ ಸರ್ಕಾರ ಮಾಡುತ್ತದೆ. ಇನ್ನು ಹೇಳತಕ್ಕ ಎಷ್ಟೋ ವಿಷಯಗಳು ಇದ್ದರೂ ಸಮಯವಿಲ್ಲದ್ದರಿಂದ ಹೇಳಲು ಸಾಧ್ಯವಾಗಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಅನೇಕ ಲೋಪದೋಷಗಳಿವೆ, ಸದಸ್ಯರು ಹೇಳಿರತಕ್ಕ ಅನೇಕ ಅಂಶಗಳು ಇವೆ. ಇದನ್ನೆಲ್ಲ investigate ಮಾಡಿ ನೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಇಷ್ಟು ಭರವಸೆಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—The House will now adjourn and meet tomorrow at 12-30 P.M.

The House adjourned at Thirty-five Minutes past Six of the Clock to meet again at Thirty Minutes past Twelve of the Clock on Thursday, the 19th September 1963.

WD 1194—GPB—900—26-11-63